ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ **1205(1298)**
ಸದಸ್ಯರ ಹೆಸರು **ಶ್ರೀ ಪಾಟೀಲ್ ಎಂ ವೈ(ಆಫಜಲ್‌ಪುರ್)**
ಉತ್ತರಿಸುವವರು **ಶ್ರೀ ಬಿ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ) ಅಫಜಲಪುರ ನಗರದಲ್ಲಿ ಮಾದರಿಯ ಪ್ರಾಥಮಿಕ ಶಾಲೆ ಕಟ್ಟಡವು ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಬಂದಿದೆ

ಆ) ಈ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯ ಹೆಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಬಂದಿದ್

ಇ) ವಿದ್ಯಾರ್ಥಿಗಳ ಅನುಪಾತದಲ್ಲಿ ಕೊರಡಿಗಳಿಲ್ಲದೆ ವಿದ್ಯಾರ್ಥಿಗಳು ಬಯಲಿನಲ್ಲಿ ವ್ಯಾಸಂಗ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಬಂದಿದೆ

ಈ) ಇದ್ದಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡ ಕುಸಿದರೆ ಸಾವಿರಾರು ವಿದ್ಯಾರ್ಥಿಗಳ ಪ್ರಾಣಕ್ಕೆ ಅಪಾಯ ಇರುವುದರಿಂದ ಹೊಸ ಕಟ್ಟಡ ನಿರ್ಮಾಣಕ್ಕೆ ಸರ್ಕಾರ ಯೋಚನೆ ಮಾಡಿದೆಯೇ?

ಸರ್ವ ಶಿಕ್ಷಣ ಅಭಿಯಾನದಡಿ ಸದರಿ ಶಾಲೆಗೆ ಈ ಕೆಳಕಂಡಂತೆ ಕೊರಡಿಗಳ ನಿರ್ಮಾಣಕ್ಕೆ ಮಂಜೂರಾತಿ ನೀಡಿದೆ

2004–05 1 ಕೊರಡಿ ನಿರ್ಮಾಣ ಕಾರ್ಯ

2005–06 1 ಕೊರಡಿ ಪೂರ್ಣಗೊಂಡಿದೆ

2006–07 3 ಕೊರಡಿ

[ಅದರಲ್ಲಿ ಒಂದು ಕೊರಡಿ ಕಾರ್ಯ ಪೂರ್ಣಗೊಂಡಿದ್ದು ಉಳಿದ ಎರಡು ಕೊರಡಿಗಳ ಕಾಮಗಾರಿ ಕಾರ್ಯವು ಲಿಂಟಲ್ ಮಟ್ಟಕ್ಕೆ ಬಂದಿರುತ್ತದೆ]

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1206(1299)**
ಸದಸ್ಯರ ಹೆಸರು **ಶ್ರೀ ಪಾಟೀಲ್ ಎಂ ವೈ(ಆಫಜಲ್‌ಪುರ್)**
ಉತ್ತರಿಸುವವರು **ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು)**

1) ಅಫಜಲಪೂರ ತಾಲ್ಲೂಕಿನಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಹಾಗೂ ನಬಾರ್ಡ್ ಯೋಜನೆಯಲ್ಲಿ ಪೂರ್ತಿಗೊಂಡ ರಸ್ತೆಗಳೆಷ್ಟು?

ಅಫಜಲಪುರ ತಾಲ್ಲೂಕಿನಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಒಟ್ಟು ನಾಲ್ಕು ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಅವುಗಳಲ್ಲಿ ಹಂತ–1ರಲ್ಲಿ ಒಂದು ಕಾಮಗಾರಿ, ಹಂತ–2ರಲ್ಲಿ ಎರಡು ಕಾಮಗಾರಿಗಳು ಮತ್ತು

ಹಂತ–3ರಲ್ಲಿ ಒಂದು ಕಾಮಗಾರಿ ಪೂರ್ಣಗೊಂಡಿರುತ್ತದೆ, ನಬಾರ್ಡ್ ಯೋಜನೆಯ ಆರ್‌ಐಡಿಎಫ್–VIIIರ ಮಾಲಿಕ ಯಡಿ ಒಂದು ಕಾಮಗಾರಿ ಪೂರ್ಣಗೊಂಡಿರುತ್ತದೆ

2) ಈ ರಸ್ತೆಗಳ ನಿರ್ವಹಣೆಯ ಅವಧಿ ಮುಗಿಯುತ್ತಿದ್ದರೂ ಕೆಟ್ಟು ಹೋದಂತಹ ರಸ್ತೆಗಳನ್ನು ದುರಸ್ಥಿ ಮಾಡದಿರಲು ಕಾರಣವೇನು?

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಹಂತ–1, ಹಂತ–2ರಲ್ಲಿ, ರಸ್ತೆಗಳು ಪೂರ್ತಿಗೊಂಡ ನಂತರ ಗುತ್ತಿಗೆದಾರರು ನಿರ್ವಹಣೆ ಕಾಮಗಾರಿಯನ್ನು ಕೈಗೊಳ್ಳಬೇಕಾಗಿದ್ದು ಅದರಂತೆ ರಸ್ತೆಗಳ ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದೆ ಹಂತ–3 ರಲ್ಲಿ ನಿರ್ವಹಣೆಗಾಗಿ ಪ್ರತ್ಯೇಕವಾಗಿ ನಿರ್ವಹಣಾ ನಿಧಿಯನ್ನು ಒದಗಿಸಲಾಗಿದ್ದು 5 ವರ್ಷಗಳ ಅವಧಿಗೆ ನಿರ್ವಹಣೆಯನ್ನು ಕೈಗೊಳ್ಳಲು ಕರಾರು ಮಾಡಿಕೊಳ್ಳಲಾಗಿದ್ದು, ನಿರ್ವಹಣೆಯ ಕೆಲಸವನ್ನು ಕೈಗೊಳ್ಳುತ್ತಿದ್ದಾರೆ

ನಬಾರ್ಡ್ ಯೋಜನೆಯಡಿ ರಸ್ತೆ ಕಾಮಗಾರಿಯು ಪೂರ್ಣಗೊಂಡ ದಿನಾಂಕದಿಂದ 3 ವರ್ಷಗಳ ಅವಧಿವರೆಗೆ ಗುತ್ತಿಗೆದಾರರು ನಿರ್ವ ಹಣೆ ಮಾಡಬೇಕಾಗಿರುತ್ತದೆ ಇದುವರೆಗೆ ನಿರ್ವಹಣೆ ಕೆಲಸಗಳನ್ನು ಕೈಗೊಂಡಿರುವುದಿಲ್ಲ

3) ಹಾಗಿದ್ದಲ್ಲಿ ಈ ದುರಸ್ಥಿ ಕಾರ್ಯವನ್ನು ಮಾಡದಿರದ ಗುತ್ತಿಗೆದಾರರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಹಂತ–1 ಮತ್ತು ಹಂತ–2ರಲ್ಲಿ ನಿರ್ವಹಣೆ ಕೆಲಸವನ್ನು ನಿಗದಿತ ಅವಧಿಯಲ್ಲಿ ಗುತ್ತಿಗೆದಾರರು ಕೈಗೊಳ್ಳದಿದ್ದಲ್ಲಿ, ಟೆಂಡರ್ ಕರಾರಿನಂತೆ ಗುತ್ತಿಗೆದಾರರ ಮುಂಗಡ ರೇವಣಿ(EMD) ಮತ್ತು ನಿಶ್ಚಿತ ಭದ್ರತಾ ರೇವಣಿ(FSD)ಗಳನ್ನು ಬಿಡುಗಡೆಗೊಳಿಸಲಾಗುವುದಿಲ್ಲ ಹಾಗೂ ಈ ಮೊತ್ತವನ್ನು ಕಟಾಯಿಸಿ ನಿರ್ವಹಣೆ ಕೆಲಸವನ್ನು ನಿರ್ವಹಿಸಲಾಗುವುದು ಹಂತ–3 ರಿಂದ ಮಂಜೂರಾದ ನಿರ್ವಹಣಾ ಅಂದಾಜಿನನ್ವಯ ಕೆಲಸ ಕೈಗೊಳ್ಳಲಾಗುವುದು ನಬಾರ್ಡ್ ಯೋಜನೆಯಡಿ ಪೂರ್ಣಗೊಂಡ ಕಾಮಗಾರಿಯನ್ನು ನಿರ್ವಹಿಸಿರುವ ಗುತ್ತಿಗೆದಾರರು ಟೆಂಡರ್ ನಿಯಮಾವಳಿಯಂತೆ ರಸ್ತೆ ನಿರ್ವಹಣೆ ಮಾಡದ ಪ್ರಯುಕ್ತ, ಗುತ್ತಿಗೆದಾರರಿಗೆ ನೋಟೀಸನ್ನು ಜಾರಿ ಮಾಡಲಾಗಿದೆ ಮತ್ತು ಟೆಂಡರ್ ಕರಾರಿನಂತೆ E M D ಮತ್ತು F S D ಗಳನ್ನು ಬಿಡುಗಡೆಗೊಳಿಸಿರುವುದಿಲ್ಲ